Karnatak Law Society's
Vishwanathrao Deshpande Institute of Technology
(Approved by AICTE, New Delhi. Affiliated to VTU, Belagavi)
(Recognised Under Section 2(f) by UGC, New Delhi)
Udyog Vidya Nagar, Haliyal – 581329, Dist: Uttar Kannada (Karnataka)
Phone: 08284-220861, 220334, 221409, Fax: 08284-220813
www.klsvdit.edu.in principal@klsvdit.edu.in

Date: 15-05-2022

**ಪತ್ರಿಕಾ ಪ್ರಕಟಣೆ**

## ಮಾಜಿ ವಿದ್ಯಾರ್ಥಿಗಳ ಪುನರ್ಮಿಲನ ಕಾರ್ಯಕ್ರಮ

ಕೆ.ಎಲ್.ಎಸ್ ವಿ.ಡಿ.ಐ.ಟಿ ಹಳಿಯಾಳದಲ್ಲಿ ಮೇ 11 ರಂದು ಮಹಾವಿದ್ಯಾಲಯದ ಸಂಸ್ಥಾಪನಾ ಸಮಾರಂಭದ ಪ್ರಯುಕ್ತ ಮಾಜಿ ವಿದ್ಯಾರ್ಥಿಗಳ ಪುನರ್ಮಿಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ 2004 ರಿಂದ 2021 ರ ಅವಧಿಯಲ್ಲಿ ಮಹಾವಿದ್ಯಾಲಯದಿಂದ ತೇರ್ಗಡೆ ಹೊಂದಿದ 100 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ಕಾಲೇಜು ಜೀವನದ ಅನುಭವಗಳನ್ನು ಹಂಚಿಕೊಂಡರು.

ಮಹಾವಿದ್ಯಾಲಯದ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ. ವಿನಾಯಕ ಲೋಕುರ್ ಮಾಜಿ ವಿದ್ಯಾರ್ಥಿಗಳ ಜೊತೆ ಸಂವಾದಲ್ಲಿ ಪಾಲ್ಗೊಂಡು ಮಹಾವಿದ್ಯಾಲಯದ ಜೊತೆಯಲ್ಲಿ ಸಂಭವನೀಯ ಸಹಯೋಗದ ಕುರಿತು ಚರ್ಚಿಸಿದರು. ಕೆ.ಎಲ್.ಎಸ್ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ. ಡಿ. ವಿ. ಕುಲಕರ್ಣಿ ಕಾರ್ಯಕ್ರದ ಅಧ್ಯಕ್ಷತೆ ವಹಿಸಿದ್ದರು.

ಅನೇಕ ಮಾಜಿ ವಿದ್ಯಾರ್ಥಿಗಳು ತಮ್ಮ ಭವಿಷ್ಯ ರೂಪಿಸಿಕೊಳ್ಳುವಲ್ಲಿ ಮಹಾವಿದ್ಯಾಲಯದ ಪಾತ್ರವನ್ನು ಸ್ಮರಿಸಿದರು. ಮಹಾವಿದ್ಯಾಲಯದ ಪ್ರಸ್ತುತ ವಿದ್ಯಾರ್ಥಿಗಳು ಮಾಜಿ ವಿದ್ಯಾರ್ಥಿಗಳ ಜೊತೆ ಉತ್ತಮ ಔದ್ಯೋಗಿಕ ಭವಿಷ್ಯ ರೂಪಿಸಿಕೊಳ್ಳುವುದರ ಕುರಿತು ಸಂವಾದ ನಡೆಸಿದರು. ಈ ಕಾರ್ಯಕ್ರಮದಲ್ಲಿ ದೆಹಲಿ, ಪುಣೆ, ಹುಬ್ಬಳ್ಳಿ, ಧಾರವಾಡ, ಬೆಂಗಳೂರು ಮತ್ತು ಹಳಿಯಾಳ ಭಾಗದ ಮಾಜಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದು ಭಾಗವಹಿಸಿದ ಎಲ್ಲ ಮಾಜಿ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ಪ್ರಾಂಶುಪಾಲರಾದ ಡಾ. ವಿ. ಎ ಕುಲಕರ್ಣಿ ಸ್ವಾಗತಿಸಿದರು. ಡಾ. ಕೆ ಎಸ್ ಪೂಜಾರ್ ವಂದಿಸಿದರು. ಪ್ರೊ. ಪ್ಲಾಸಿನ್ ಡಯಾಸ್ ನಿರೂಪಿಸಿದರು. ಪ್ರೊ. ವಿನಯ ಚಿತಾರೆ, ಪ್ರೊ. ನವೀನ್ ಸಿ. ಎಸ್, ಪ್ರೊ. ರಶ್ಮಿ ಎಂ, ಪ್ರೊ. ಪಾರ್ವತಿ ಓಣಿ, ಪ್ರೊ. ಯಾಸ್ಮೀನ್ ಶೇಖ್, ಪ್ರೊ. ರಾಜೇಶ್ವರಿ ಎನ್ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal


ATAK LAW SOCIETY'S
NATHRAO DESHPANDE
TE OF TECHNOLOGY
HALIYAL